ಇಲ್ಲವೇ ನನ್ನ ಗಮನ ಸೆಳೆಯುವ ಸೂಚನೆಗೆ ಉತ್ತರವನ್ನಾದರೂ ಕೊಡಬೇಕು. ಶ್ರೀ ಸಂಕ್ರೀಕೊಪ್ಪ ಅವರು ಕೊಟ್ಟಿರುವ ಮಧ್ಯಂತರ ವರದಿ ಬಗ್ಗೆ ಸರ್ಕಾರದವರು ಒಂದು ಹೇಳಿಕೆ ಕೊಡಬೇಕು.

ಅಧ್ಯಕ್ಷರು.—ನಾನು ಫೈಲ್ ತರಿಸಿ ನೋಡುತ್ತೇನೆ.

ನಿಯಮ ೩೩ಳಿರ ಮೇರೆಗೆ

೧) ರಾಣೆಬೆನ್ನೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನು ಹಾಕಿಸುವ ವಿಚಾರ

ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ತಾಲ್ಲೂಕಿನ ಗ್ರಾಮಗಳಾದ ೧) ಮಲ್ಲಾಪೂರ್ ಉರ್ಫ್ ಮೇಡ್ಲೇರಿ, ೨) ಮೈದೂರು ೩) ಹೂಲಿಕಟ್ಟೆಳ) ವಡೇ ರಾಮನಹಳ್ಳಿ ೫) ತಿಮ್ಮನಹಳ್ಳಿ ೬) ಅಂಕಸಾಪುರ ತಾಂಡ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವು ವಿಪರೀತವಿದ್ದು ಇದ್ದ ಬೋರುಗಳೆಲ್ಲವೂ ಬತ್ತಿಹೋಗಿರುವುದರಿಂದ ಅತಿ ಜರೂರಾಗಿ ಈ ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ಹಾಕಿಸಿಕೊಡಬೇಕೆಂದು ಸಾಮಾನ್ಯ ಆರೋಗ್ಯ ಇಲಾಖಾ ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದ ವಿಷಯದ ಬಗ್ಗೆ, ಈಗ ನನ್ನ ಹತ್ತಿರ ಮಾಹಿತಿ ಇಲ್ಲ, ಆದರ ಬಗ್ಗೆ ಗಮನ ಹರಿಸುತ್ತೇನೆ.

೨) ಬಂಟ್ವಾಳ–ಉಪ್ಪಿನಂಗಡಿ ಬಸ್ ಸಂಚಾರದ ಬಗ್ಗೆ

ಶ್ರೀ ರಾಮನಾಥರೈ.—ಮಾನ್ಯ ಅಧ್ಯಕ್ಷರೇ, ಬಂಟ್ವಾಳ–ವಗ್ಗ–ಕಾರಿಂಜ–ಉಳಿ–ಉಪ್ಪಿನಂಗಡಿ ಬಸ್ಸು ಸಂಚಾರ ಮಳೆಗಾಲದ ನಿಮಿತ್ತ ಸ್ಥಗಿತಗೊಂಡಿದ್ದು, ಮಳೆಗಾಲ ಕಳೆದು ೪ ತಿಂಗಳಾದರೂ, ಬಸ್ಸು ಸಂಚಾರ ಪುನರಾರಂಭವಾಗದಿರಲು ಕಾರಣವೇನು ? ಬಸ್ಸು ಸಂಚಾರವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್.—ಸಂಬಂಧಪಟ್ಟ ಮಂತ್ರಿಯವರಿಗೆ ಈ ವಿಷಯವನ್ನು ತಿಳಿಸಿ ಉತ್ತರವನ್ನು ತರಿಸಿಕೊಡುತ್ತೇನೆ.

೩) ಪುತ್ತೂರು ಉಪ ಮಾರುಕಟ್ಟೆ ವ್ಯವಸ್ಥೆ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಪುತ್ತೂರು ಉಪ ಮಾರುಕಟ್ಟೆ ಕಳೆದ ಮೂರು ನಾಲ್ಕು ವರ್ಷಗಳಿಂದ ಕಟ್ಟಡ ಕೆಲಸ ಕಾರ್ಯ ಎಲ್ಲಾ ಪೂರ್ತಿಯಾಗಿದ್ದು, ಇದಕ್ಕೆ ಸರಿಯಾದ ಮಾರ್ಗದ ವ್ಯವಸ್ಥೆ ಇಲ್ಲ ಎನ್ನುವ ಒಂದೇ ವಿಚಾರಕ್ಕೋಸ್ಕರ ಇದರ ಉದ್ಘಾಟನೆ ಆಗದೇ ಬಾಕಿ ಉಳಿದಿದೆ. ತಾರೀಖು ೨೬ ರಂದು ಮಾನ್ಯ ಮಂತ್ರಿಗಳು ಶ್ರೀಮಾನ್ ನಜೀರ್‌ಸಾಹೇಬ್‌ರವರು ಇದನ್ನು ಉದ್ಘಾಟಿಸಿವ್ವರು. ಆದರೆ ಇದಕ್ಕೆ ಸಂಬಂಧಪಟ್ಟ ಮಾರ್ಗದ ವ್ಯವಸ್ಥೆ ಇನ್ನೂ ಆಗಿಲ್ಲ. ಇಲ್ಲಿಗೆ ಸಂಪರ್ಕ ಬೆಳೆಸಬೇಕಾದರೆ ೪-೫ ಕಿಲೋಮೀಟರ್ ಸುತ್ತಿ ಬಳಸಿ ಹೋಗುವುದರಿಂದ ಪುತ್ತೂರು ಉಪ ಮಾರುಕಟ್ಟೆಯಿಂದ ಸಿಗುವಂತಹ ಪ್ರಯೋಜನಕ್ಕಿಂತ ಹೆಚ್ಚಾಗಿ ತೊಂದರೆ ಆಗುವಂತಹ ಸಂಭವವಿದೆ. ಆದುದರಿಂದ ಮಾರುಕಟ್ಟೆ ಉದ್ಘಾಟನೆಯಾದ ಕೂಡಲೇ ಕಾನೂನು ಪ್ರಕಾರ ಎಲ್ಲಾ ಖಾಸಗಿ ವ್ಯಾಪಾರ, ವಾರಕೊಮ್ಮೆ ಸಂತೆ ಇವೆಲ್ಲಾ ಉದ್ಘಾಟನೆಯಾದ ಉಪ ಮಾರುಕಟ್ಟೆ ಪರ್ಗಾಯಿಸಬೇಕು. ಇದರಿಂದ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುವ ಸಂಭವವಿದ್ದು ಮಾನ್ಯ ಮಂತ್ರಿಗಳು ಪರ್ಗದ ವ್ಯವಸ್ಥೆ ಆಗುವ ತನಕ ಕಾನೂನು ಪ್ರಕಾರ ಪರ್ಗಾವಣೆ ಮಾಡಬೇಕಾದ ಮಾರುಕಟ್ಟೆಗಳು ಸದ್ಯಕ್ಕೆ ಹಿಂದೆಯೇ ಇದ್ದಲ್ಲಿ ನಡೆಯುವ ರೀತಿಯಲ್ಲಿ ಅನುಮತಿ ಕೊಡಬೇಕಾಗಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾವುಗಳು ಸುಮ್ಮನೆ ಈ ರೀತಿ ಓದುವುದು, ಮಂತ್ರಿಗಳು ಸುಮ್ಮನೇ ಕುಳಿತುಕೊಂಡು ಕೇಳಿ ಸುಮ್ಮನಾಗುವುದು ಸರಿಯಲ್ಲ.

ಅಧ್ಯಕ್ಷರು.—ಉತ್ತರಗಳನ್ನು ನಾವು ತರಿಸಿಕೊಡುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ —ಮಾನ್ಯ ಅಧ್ಯಕ್ಷರೇ, ಪುತ್ತೂರು ಉಪ ಮಾರುಕಟ್ಟೆ ಕಟ್ಟಡದ ಕೆಲಸ ಮುಗಿದ ಮೇಲೆ ವ್ಯಾಪಾರವನ್ನು ಅಲ್ಲಿಯೇ ಪ್ರಾಡತಕ್ಕದ್ದು ನ್ಯಾಯವಾಗಿದೆ. ಈಗ ಇರತಕ್ಕಂಥ ರಸ್ತೆಯು ಸದಸ್ಯರು ಹೇಳಿರುವ ಹಾಗೆ ದೂರವಾಗಿರುವುದು ನಿಜ. ಇದಕ್ಕಿಂತ ಹತ್ತಿರವಾದ ಮಾರ್ಗ ನಿರ್ಮಾಣದ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದು, ಭೂ ಸ್ವಾಧೀನ ಪ್ರಕರಣ ನಡೆಯುತ್ತಿದೆ. ಕೆಲವು ಭೂ ಮಾಲೀಕರು ಜಮೀನನ್ನು ಬಿಟ್ಟುಕೊಡಲು ಒಪ್ಪಿಲ್ಲವಾದ್ದರಿಂದ ಈ ಸಮೀಪದ ರಸ್ತೆಯು ಕೆಲಸ ನಿಂತಿದೆ. ಇವರ ಮನವೊಲಿಸಿ ಈ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಸಮೀಪ ಮಾರ್ಗದ ವ್ಯವಸ್ಥೆ ಮಾಡಲು ಕ್ರಮ ತೆಗದುಕೊಳ್ಳುತ್ತೇವೆ. ಅಲ್ಲಿಯವರೆಗೆ ಸ್ವಲ್ಪ ತೊಂದರೆಯಾದರೂ ಯಾವ ಉದ್ದೇಶಕ್ಕಾಗಿ ಉಪ ಮಾರುಕಟ್ಟೆಯನ್ನು ಕಟ್ಟಲಾಗಿ ದೆಯೋ, ಆ ಉದ್ದೇಶ ಸಫಲವಾಗಬೇಕಾದರೆ ಉದ್ಘಾಟನೆಯಾದ ಉಪ ಮಾರುಕಟ್ಟೆಯನ್ನೇ ಉಪಯೋಗಿಸಬೇಕು. ಈ ತೊಂದರೆಯು ಕೇವಲ ತಾತ್ಕಾಲಿಕ.

4. Non Collection of levy Paddy in Kodagu Dist

SRI. D. A. CHINNAPPA.—The Hon'ble Speaker, in Kodagu District Government has not started collecting levy paddy till to day, even though the harvest is almost over. The Tahsildar and Food Assistant have called for a meeting of the mill owners on 23-1-1986 at the chambers of the Tahsildar, Madikeri. In the meeting the concerned officials have directed the mill owners to buy paddy at Mandya, Mysore or Shimoga and put levy paddy there and show receipt for having delivered the levy rice at the collecting point of the district stated above. The places shown are far away from Kodagu District and it is an impossible task for the rice mill owners. Why this kind of order issued by the officials ? I urge the Government to issue orders for collecting levy rice at Kodagu District only at the points of collection of levy rice.

ಶ್ರೀ ಡಿ. ಮಂಜುನಾಥ್. —ಸಂಬಂಧಪಟ್ಟ ಮಂತ್ರಿಗಳಿಗೆ ಈ ವಿಷಯವನ್ನು ಹೇಳಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಕಾವಲ್ ಬೈರ ಸಂದ್ರದಲ್ಲಿ ವಾಸವಾಗಿರುವ ಸರಕಾರಿ ನಾಕರರ ಮೇಲೆ ಹಲ್ಲೆ ಮಾಡಿದವರ ಮೇಲೆ ಕ್ರಮ ತೆಗೆದು ಕೊಳ್ಳುವ ಬಗ್ಗೆ

ಶ್ರೀ ಪ್ರತಾಪಚಂದ್ರ ಶೆಟ್ಟಿ —ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದೇ ಇರುವುದರಿಂದ, ಈಗ ನಾನು ಓದುವುದಕ್ಕೆ ಇಚ್ಚಿಸುವುದಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಶೆಟ್ಟಿಯವರೇ, ನಿಮಗೆ ಖಂಡಿತ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಪ್ರತಿ ವರ್ಷವೂ, ನಾನು ಹೀಗೆ ಓದುತ್ತಲೇ ಇದ್ದೇವೆ ಆದರೆ ಮಂತ್ರಿಗಳಿಂದ ಮಾತ್ರ ಉತ್ತರ ಬರುವುದಿಲ್ಲ. ಆದ್ದರಿಂದ ಇದನ್ನು ಸದನದಲ್ಲಿ ಓದುವುದಕ್ಕೆ ನಾನು ಇಚ್ಚೆ ಪಡುವುದಿಲ್ಲ.

ಅಧ್ಯಕ್ಷರು.—ಮಾನ್ಯ ಶೆಟ್ಟಿಯವರೇ, ಓದಿ ಹೇಳಿ. ನೀವು ನಿರಾಶಾವಾದಿಗಳಾಗಬಾರದು

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ತಮ್ಮ ಕೇಳಿಕೆ ಪ್ರಕಾರ ಮತ್ತು ನಿಮಗೆ ಗೌರವ ಕೊಟ್ಟು ಈ ಸಂದರ್ಭದಲ್ಲಿ ನಾನು ಓದುತ್ತೇನೆ.

ಬೆಂಗಳೂರು ನಗರದ ದೇವರ ಜೀವನಹಳ್ಳಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಾವಲ್ ಬೈರಸಂದ್ರದಲ್ಲಿ ಪಾಪಯ್ಯ ಕಾಂಪೌಂಡಿನಲ್ಲಿ ವಾಸಮಾಡುತ್ತಿರುವ ಹಾಗೂ ಪಿ. ಅಂಡ್ ಟಿ. ಯಲ್ಲಿ ಕೆಲಸ